# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/3004/2019-20/ CYS-23

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು-560001,
ದಿನಾಂಕ: 19 FEB 2020

## ಸುತ್ತೋಲೆ

**ವಿಷಯ:** ವಿಕಲಚೇತನ ಕಂದಾಯ ಸಹಾಯಕರುಗಳಿಗೆ ನೀಡಲಾಗಿದ್ದ ಭವಿಷ್ಯನಿಧಿ ಮತ್ತು ಇ.ಎಸ್.ಐ ಕಂಪನಿ ವಂತಿಕೆಯನ್ನು ಕಡಿತಗೊಳಿಸುವ/ ಕಡಿತಗೊಳಿಸದಿರುವ ಬಗ್ಗೆ.

**ಉಲ್ಲೇಖ:** ಕವಿಪ್ರನಿನಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/4682/2006-07(5), ದಿನಾಂಕ: 16.01.2020.

******

ಉಲ್ಲೇಖಿತ ಕವಿಪ್ರನಿನಿಯ ಪತ್ರದಲ್ಲಿ ಇತ್ತೀಚೆಗೆ ಖಾಯಂಗೊಂಡಿರುವ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ಇ.ಎಸ್.ಐ ಮತ್ತು ಪಿ.ಎಫ್ ಮೊತ್ತವನ್ನು ಕಡಿತಗೊಳಿಸುವ ಕುರಿತಂತೆ ಸ್ಪಷ್ಟನೆ ನೀಡಲಾಗಿದೆ.

ಸದರಿ ಪತ್ರದಲ್ಲಿ ವಿಕಲಚೇತನ ಕಂದಾಯ ಸಹಾಯಕರುಗಳು ದಿನಾಂಕ: 29.12.2010 ರಿಂದ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಗೆ ಒಳಪಡುತ್ತಾರೆ. ಆದ್ದರಿಂದ ಇ.ಎಸ್.ಐ ಕಡಿತವನ್ನು ಹೊರತುಪಡಿಸಿ, ಎಂಪ್ಲಾಯರ್‌ಗೆ ಸಂಬಂಧಿತ ಭವಿಷ್ಯನಿಧಿ (ಪಿ.ಎಫ್) ಕಂಪನಿಯ ವಂತಿಕೆಯನ್ನು ದಿನಾಂಕ: 29.12.2010 ರಿಂದ ಖಾಯಂಗೊಳಿಸುವವರೆಗೂ ಬಡ್ಡಿ ಸಮೇತವಾಗಿ, ಪ್ರಸ್ತುತ ಇವರುಗಳಿಗೆ ಪಾವತಿಸುವ ಬಾಕಿ ಮೊತ್ತದಲ್ಲಿ ಕಡಿತಗೊಳಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಡಾ|| ಎಂ.ಮಹೇಶ್ ಕ.ಆ.ಸೇ
ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಬೆ.ವಿ.ಕಂ

ಪ್ರತಿ:

1. ಎಲ್ಲಾ ಮುಖ್ಯ ಇಂಜಿನಿಯರ್(ವಿ.)/ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವಲಯ, ಬೆವಿಕಂ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ.)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವೃತ್ತ, ಬೆವಿಕಂ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ.)/ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ, ಬೆವಿಕಂ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿ&ಸೇ), ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
5. ಉ.ಪ್ರ.ವ್ಯ(ಸಿ)/ ಸ.ಪ್ರವ್ಯ(ಸಿ-3)/ ಮುಖ್ಯ ಕಡತ.

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/4682/2006-07(5)** **ದಿನಾಂಕ:** 16 JAN 2020

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ.ಸಂ.ಅ),
ಹೆಸ್ಕಾಂ,
**ಹುಬ್ಬಳ್ಳಿ.**

ಮಾನ್ಯರೆ,

**ವಿಷಯ:** ವಿಕಲಚೇತನ ಕಂದಾಯ ಸಹಾಯಕರುಗಳಿಗೆ ನೀಡಲಾಗಿದ್ದ ಭವಿಷ್ಯನಿಧಿ ಮತ್ತು ಇ.ಎಸ್.ಐ ಕಂಪನಿ ವಂತಿಕೆಯನ್ನು ಕಡಿತಗೊಳಿಸುವ/ಕಡಿತಗೊಳಿಸದಿರುವ ಬಗ್ಗೆ ಸ್ಪಷ್ಟೀಕರಣ.

**ಉಲ್ಲೇಖ:**
1. ದಿನಾಂಕ: 21.009.2019 ರ ತಮ್ಮ ಪತ್ರ ಸಂಖ್ಯೆ: ಹೆಚ್.ಸಿ.ಓ-07/ಡಿ197/2017-18.
2. ನಿಗಮದ ದಿನಾಂಕ: 23.12.2019 ರ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/4682/2006-07(5)

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಕಲಚೇತನ ಕಂದಾಯ ಸಹಾಯಕರುಗಳಿಗೆ ನೀಡಲಾಗಿದ್ದ ಭವಿಷ್ಯನಿಧಿ ಮತ್ತು ಇ.ಎಸ್.ಐ ಕಂಪನಿ ವಂತಿಕೆಯನ್ನು ಕಡಿತಗೊಳಿಸುವ/ಕಡಿತಗೊಳಿಸದಿರುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಉಲ್ಲೇಖ (1) ರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತುತ ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳು ದಿನಾಂಕ: 29.12.2010 ರಿಂದ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಗೆ ಒಳಪಡುತ್ತಾರೆ. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವಾಗ ಇ.ಎಸ್.ಐ ಕಡಿತವು ಕಂಪನಿಯಿಂದ ಕಡ್ಡಾಯ ಕಡಿತವಾಗಿದ್ದರಿಂದ, ಆ ಮೊತ್ತವನ್ನು ನೌಕರನಿಂದ ಕಡಿತಗೊಳಿಸದಂತೆಯೂ ಹಾಗೂ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ದಿನಾಂಕ: 29.12.2010 ರಿಂದ ಖಾಯಂಗೊಳಿಸುವವರೆಗೂ ನೀಡಲಾಗಿದ್ದ ಭವಿಷ್ಯ ನಿಧಿಯ ಕಂಪನಿಯ ವಂತಿಕೆಯನ್ನು ಬಡ್ಡಿ ಸಮೇತವಾಗಿ, ಪ್ರಸ್ತುತ ನೀಡುವ ಬಾಕಿ ಮೊತ್ತದಲ್ಲಿ ಕಡಿತಗೊಳಿಸುವಂತೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಉಪ ಪ್ರಧಾನ ವ್ಯವಸ್ಥಾಪಕರು
(ಸಿಬ್ಬಂದಿ)

**ಪ್ರತಿಯನ್ನು:**
1. ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ), ಬೆಸ್ಕಾಂ/ಸೆಸ್ಕ್/ಜೆಸ್ಕಾಂ, ಬೆಂಗಳೂರು/ಮೈಸೂರು/ಕಲಬುರಗಿ.
2. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ/ಆಂ.ಪ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.